ಡಾ: ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :—

ಅ) ಹೌದು

ಆ) ಈಗ ತಾತ್ಕಾಲಿಕವಾಗಿ ಪ್ರಾಥಮಿಕ ಆರೋಗ್ಯ ಕೇಂದ್ರ ಕೋಣಂದೂರಿನ ಮಹಿಳಾ ವೈದ್ಯರನ್ನು ತೀರ್ಥಹಳ್ಳಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುವಂತೆ ಕ್ರಮ ತೆಗೆದುಕೊಳ್ಳಲಾಗಿದೆ

ಇ) ಈ ಆಸ್ಪತ್ರೆಗೆ ನೇಮಕ : ವರ್ಗಾವಣೆಗೊಂಡ ವೈದ್ಯರು ಕರ್ತವ್ಯ ವರದಿ ಮಾಡಿಕೊಳ್ಳದೆ ಇರುವುದರಿಂದ ಹುದ್ದೆ ಖಾಲಿ ಇದೆ.

ಈ ಖಾಲಿ ಹುದ್ದೆಯನ್ನು ಸ್ನಾತಕೋತ್ತರ ವ್ಯಾಸಂಗ ಮುಗಿಸಿರುವ ಮಹಿಳಾ ವೈದ್ಯರನ್ನು ನೇಮಿಸುವ ಮೂಲಕ ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು.

ಸ್ವಸ್ತಿ ಗ್ರಾಮ ಯೋಜನೆ.

763(539) ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) :— ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸ್ವಸ್ತಿ ಗ್ರಾಮ ಯೋಜನೆ ಎಂದಿನಿಂದ ಪ್ರಾರಂಭವಾಗಿದೆ?

ಆ) ಇದುವರೆಗೆ ಈ ಯೋಜನೆಯಡಿ ಆಳವಡಿಸಲಾದ ಹಳ್ಳಿಗಳ ಸಂಖ್ಯೆ ಎಷ್ಟು?

ಇ) ಪ್ರತಿಯೊಂದು ಗ್ರಾಮದಲ್ಲಿ ಮಾಡಿದ ಅಭಿವೃದ್ಧಿ ಕಾಮಗಾರಿಗಳು ಯಾವುವು?

ಈ) 1998-99 ರಲ್ಲಿ ಈ ಯೋಜನೆಯಡಿ ತೆಗೆದುಕೊಳ್ಳಲಾದ ಹಳ್ಳಿಗಳ ಸಂಖ್ಯೆ ಎಷ್ಟು?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :—

ಅ) ದಿನಾಂಕ : 2-10-1997 ರಿಂದ ಪ್ರಾರಂಭವಾಗಿದೆ.

ಆ) 20 ಗ್ರಾಮಗಳಿಗೆ ಪ್ರಾಯೋಜನಕರು ಮುಂದೆ ಬಂದಿದ್ದು, ಇದರ ಪೈಕಿ 13 ಗ್ರಾಮಗಳಲ್ಲಿ ಈ ಯೋಜನೆಯನ್ನು ಕೈಗೊಳ್ಳಲಾಗಿದೆ.

ಇ) ಅನುಬಂಧದಲ್ಲಿ ಒದಗಿಸಲಾಗಿದೆ.

ಈ 12 ಗ್ರಾಮಗಳು

ಅನುಬಂಧ

ಕ್ರ. ಸಂ.	ಗ್ರಾಮಗಳ ಹೆಸರು	ಜಿಲ್ಲೆ	ಕಾಮಗಾರಿಗಳ ವಿವರ
1.	ಚಿಂತ್ರಹಳ್ಳಿ	ಬಳ್ಳಾರಿ	ಜಿಎಲ್ಎನ್ಆರ್ ಟ್ಯಾಂಕಿ ನಿರ್ಮಾಣ, ಚರಂಡಿ ನಿರ್ಮಾಣ, ರಸ್ತಗೆ ಜಲ್ಲೆ ಮತ್ತು ಡಾಂಬರೀಕರಣ ಶಾಲಾ ಕೊಠಡಿ ನಿರ್ಮಾಣ, ವಸತಿರಹಿತರಿಗೆ ಮನೆ ನಿರ್ಮಾಣ, ಅಂಗನವಾಡಿ ಕಟ್ಟಡ, ದ್ವಾಪ್ರಾ ಶೆಡ್ ನಿರ್ಮಾಣ, ಡ್ರೈನೇಜ್, ಎಎನ್ಎಂ ಉಪಕೇಂದ್ರಗಳು.
2.	ಸಾಣೇಹಳ್ಳಿ	ಚಿತ್ರದುರ್ಗ	3 ಚೆಕ್‌ಡ್ಯಾಮ್‌ಗಳ ನಿರ್ಮಾಣ.
3.	ಪೆರ್ಮುದ		ಸಮುದಾಯಭವನ ನಿರ್ಮಾಣ, ಕುಡಿಯುವ ನೀರಿನ
4.	ಕುತ್ತೆತ್ತೂರು	ದಕ್ಷಿಣ ಕನ್ನಡ	ಸರಬರಾಜು ಕಾರ್ಯಕ್ರಮ, ಬಸ್ ನಿಲ್ದಾಣ ರಚನೆ
5.	ಬಾಳ		ರಸ್ತೆ ದುರಸ್ಥಿ ಹಾಗೂ ಡಾಂಬರೀಕರಣ, ಪ್ರಾಥಮಿಕ
6.	ಕಳವಾರು		ಆರೋಗ್ಯ ಕೇಂದ್ರ ನಿರ್ವಹಣೆ, ಶಾಲಾಕೊಠಡಿಗಳ ನಿರ್ಮಾಣ.
7.	ಮುಡಿಬಾಳ		ಕುಡಿಯುವ ನೀರಿನ ವ್ಯವಸ್ಥೆ, ರಸ್ತೆ ನಿರ್ಮಾಣ.
8.	ಬೆಟಗೇರ	ಗುಲ್ಬರ್ಗ	ಶೌಚಾಲಯ, ಶಾಲಾಕಟ್ಟಡ ಇತ್ಯಾದಿ.
9.	ಕಮರವಾಡಿ		
10.	ಮಾಳಖೇಡ		
11.	ಉದ್ಬೂರು	ಮೈಸೂರು	ಡ್ರೈನೇಜ್, ಕಲ್ವರ್ಟ್, ಅಂಗನವಾಡಿ ಕಟ್ಟಡ, ಶಾಲಾ ಕಟ್ಟಡ, ನಿವೇಶನ ಹಂಚಿಕೆ, ಮನೆಗಳು, ರಸ್ತೆ.
12.	ದರದನಹಳ್ಳಿ	ಹಾಸನ	ಮಸತಿ ನಿರ್ಮಾಣಕ್ಕಾಗಿ ಬೇಕಾದ ಜಮೀನು ಖರೀದಿ,
13.	ಕ್ಯಾತನಹಳ್ಳಿ		ಚರಂಡಿ ನಿರ್ಮಾಣ, ರೇಷ್ಮೆ ಕೃಷಿ ತರಬೇತಿ, ಶಾಲಾ ಕೊಠಡಿ ನಿರ್ಮಾಣ ಮುಂತಾದವು.

ನಿರ್ಮಲ ಕರ್ನಾಟಕ ಯೋಜನೆ.

754 (476) ಶ್ರೀ ಉಜ್ಜಿನೇಶ್ವರ ಬಸವನಪ್ಪ ಬಣಕಾರ್ (ಹಿರೇಕೆರೂರು) :— ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 98-99ನೇ ಸಾಲಿನಲ್ಲಿ ನಿರ್ಮಲ ಕರ್ನಾಟಕ ಯೋಜನೆಯಡಿಯಲ್ಲಿ ಹಾಕಿಕೊಂಡ ಆರ್ಥಿಕ ಮತ್ತು ಭೌತಿಕ ಗುರಿ ಎಷ್ಟು?

ಆ) ಹಿರೇಕೆರೂರು ತಾಲ್ಲೂಕಿನಲ್ಲಿ ನಿರ್ಮಲ ಕರ್ನಾಟಕ ಯೋಜನೆಯಡಿ ಬಾಕಿಯಿರುವ ಬಿಲ್ಲುಗಳ ಮೊತ್ತ ಎಷ್ಟು?

ಇ) ಈ ಬಾಕಿ ಹಣ ತೀರಿಸಲು ಎಂದು ಹಣ ಬಿಡುಗಡೆ ಮಾಡಲಾಗುವುದು?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು):—

ಅ) ನಿರ್ಮಲ ಗ್ರಾಮ ಯೋಜನೆಯ 98-99ನೇ ಸಾಲಿನ ಆರ್ಥಿಕ ಮತ್ತು ಭೌತಿಕ ಗುರಿ ಅನುಕ್ರಮವಾಗಿ ರೂ.36.00 ಕೋಟಿ ಮತ್ತು 2.25 ಲಕ್ಷ ಶೌಚಾಲಯಗಳು.

ಆ) ರೂ. 5.80 ಲಕ್ಷ.

ಇ) ಈಗಾಗಲೇ ಹಿರೇಕೆರೂರು ತಾಲ್ಲೂಕು ಪಂಚಾಯತಿಗೆ ರೂ. 9.00 ಲಕ್ಷ ಬಿಡುಗಡೆ ಮಾಡಲಾಗಿದೆ.

ಗ್ರಾಮಪಂಚಾಯತ್ ಸದಸ್ಯರ ಮುಂದವರಿಕೆ.

765(480) ಶ್ರೀ ಉಜ್ಜಿನೇಶ್ವರ ಬಸವನಪ್ಪ ಬಸಕಾರ್ (ಹಿರೇಕೆರೂರು):— ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಹಾಗೂ ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಸುಗ್ರೀವಾಜ್ಞೆಯ ಪ್ರಕಾರ ಹೊಸ ಗ್ರಾಮ ಪಂಚಾಯತಿಗಳ ರಚನೆಯು ಯಾವ ಹಂತದಲ್ಲಿದೆ?

2. ಚುನಾವಣೆಗಳನ್ನು ಎಂದು ನಡೆಸಲಾಗುವುದು?

3. ಅಲ್ಲಿಯವರೆಗೆ ಈಗಿರುವ ಚುನಾಯಿತ ಪ್ರತಿನಿಧಿಗಳನ್ನು ಮುಂದುವರೆಸಲಾಗುವುದೇ?